

ಸು.ರಂ. ಎಕ್ಕುಂಡಿ

ಕಲೆ: ವಿಶ್ವನಾಥ್ ಎ.ಎಸ್.



# ಅರಣ್ಯಾನಿ

1

ಮೌನವನು ಮೈತುಂಬ ಹೊದ್ದಿರುವ ಕಾಡು,
ಈ ಮರಗಳು ನಿಂತಲ್ಲಿ, ಏನೊ ಸದ್ದು.
ಅರಣ್ಯಾನಿ, ನಿನಗೂ ದಾರಿ ತಪ್ಪಿತೆ?
ಎಲ್ಲಿಯೊ ಎಲೆಟೊಂಗೆ ಉದುರಿಬಿದ್ದು.

2

ಎಲ್ಲೆಲ್ಲಿಯೂ ಬೆಳೆದ ಹುಲ್ಲಿನಲಿ ಮರೆಗೊಂಡು
ದಾರಿ ಕಾಣಿಸದೆ, ಕಂಗೆಟ್ಟು ನಿಂದು,
ಅರಣ್ಯಾನಿ, ಯಾಕೆ ಕೇಳುವುದಿಲ್ಲ?
ಗ್ರಾಮಕ್ಕೆ ದಾರಿಯು ಯಾವುದೆಂದು?

3

ಪೊದೆಯಾಚೆ ಮಿಡತೆ, ಇಲ್ಲೆಲ್ಲಿಯೊ ಸಡಗರ
ಕತ್ತಲಿನ ಕಾಮೋದ ಕಂಠ ಬಿಚ್ಚಿ,
ಗುಮ್ಮೆನಲು ಗೂಬೆ, ಓ ಅರಣ್ಯಾನಿಯೆ,
ಅಲುಗದೆ ನಿಂತೆಯ ನೀನು ಬೆಚ್ಚಿ.

4

ಬಳಿಯಲ್ಲೆ ಮೇದಿವೆ ಹಸುಗಳು. ಆಗಾ
ಗ ಕಿಣಿಕಿಣಿಸುತಿವೆ ಕೊರಳಲ್ಲಿ ಗಂಟೆ,
ಅರಣ್ಯಾನಿ, ಸವಿದನಿಯು ಕೇಳಿಸಿತೆ?
ಈಗಲೂ ನಿನ್ನಲ್ಲಿ ಭಯವು ಉಂಟೆ?